SC 5/2023
PW.8

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.8**

**ಚಾಸಾ.14**

| | | |
|---|---|---|
| ಸಾಕ್ಷಿದಾರರ ಹೆಸರು | - | ಯಶವಂತ ಸಪಲಿಗ |
| ತಂದೆಯ ಹೆಸರು | - | ಸಂಜೀವ ಸಪಲಿಗ |
| ವಯಸ್ಸು | - | 55 ವರ್ಷ |
| ಉದ್ಯೋಗ | - | ಖಾಸಗಿ |
| ವಿಳಾಸ | - | ಮುಂಡ್ಕೂರು |

ದಿನಾಂಕಃ 17.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

ನಾನು ಕಳೆದ 20 ವರ್ಷಗಳಿಂದ ಮುಂಡ್ಕೂರು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಬಳಿ ಆರೋಪಿ ಬೀಡಾ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೆ. ಮೃತ ಕೃತಿಕ್ ಈತನ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಆರೋಪಿಯೂ ಸಹಾ ಈ ಹಿಂದೆ ನನ್ನ ಅಂಡಿಯ ಪಕ್ಕದಲ್ಲಿಯೇ ಹೂವಿನ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದು, ಮದುವೆಯ ನಂತರ ಸದ್ರಿ ಅಂಗಡಿಯನ್ನು ಬಿಟ್ಟು ಹೋಗಿರುತ್ತಾನೆ. ಸತೀಶ್ ನನ್ನ ಹೆಂಡತಿಯ ತಮ್ಮ. ಚಾಸಾ13 ಶಾರದ ಸತೀಶನ ಹೆಂಡತಿ. ಚಾಸಾ13 ಇವರು ಮೃತ ಕೃತಿಕನ ಮನೆಯ ಹತ್ತಿರದವರು. ಮದುವೆಯಾದ ನಂತರ ಚಾಸಾ13 ಮುಂಡ್ಕೂರಿನಲ್ಲಿ ನಮ್ಮ ಮನೆಯ ಹತ್ತಿರದಲ್ಲಿಯೇ ಗಂಡನ ಮನೆಯಲ್ಲಿ ವಾಸ ಮಾಡಿಕೊಂಡಿದ್ದಳು.

2. ಮೃತ ಕೃತಿಕ ಯಾವಾಗಲೂ ಚಾಸಾ13 ಇವರ ಮನೆಗೆ ಬಂದು ಹೋಗುತ್ತಿದ್ದ. ಮೃತ ಕೃತಿಕ ಶಾರದಳ ಮನೆಗೆ ಪದೇ ಪದೇ ಬಂದು ಹೋಗುತ್ತಿದ್ದು, ಮತ್ತು ಶಾರದಾಳ ಜೊತೆ ಆತನ

ವರ್ತನೆ ನೋಡಿ ನಮಗೆ ಅನುಮಾನ ಬಂದು ನಾವು ಆತನನಿಗೆ ಇಲ್ಲಿಗೆ ಜಾಸ್ತಿ ಬರಬೇಡ ಎಂದು ತಿಳಿಸಿದ್ದೆವು. ಆದಾಗ್ಯೂ ಸಹಾ ಆತ ಪುನಃ ಶಾರದಾಳ ಮನೆಗೆ ಬರುತ್ತಿದ್ದ. ನಂತರ ಈ ವಿಚಾರವನ್ನು ನಾವು ಕೃತಿಕನ ತಂದೆಗೆ ತಿಳಿಸಿರುತ್ತೇವೆ. ನಂತರ ಆತ ಬರುವುದನ್ನು ನಿಲ್ಲಿಸಿರುತ್ತಾನೆ.

3. ನಂತರ ಸುಮಾರು ಮೂರು ವರ್ಷಗಳ ಹಿಂದೆ ಕೃತಿಕನು ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ಗೊತ್ತಾಯಿತು. ನಂತರ ವಿಚಾರ ತಿಳಿಯಲಾಗಿ ಆತನ ಕಿಸೆಯಲ್ಲಿ ಶಾರದಾಳ ವಿಚಾರದ ಬಗ್ಗೆ ಚೀಟಿ ಬರೆದಿಟ್ಟದ್ದು ನಮಗೆ ತಿಳಿದು ಬಂತು. ನಂತರ ವಿಚಾರ ತಿಳಿಯಲಾಗಿ, ಆರೋಪಿ ಯೋಜನೆ ಮಾಡಿ ಕೊಲೆ ಮಾಡಿದ ಬಗ್ಗೆ ಆತನ ಮೊಬೈಲಿನಲ್ಲಿ ದಾಖಲಾದ ವಿಷಯಗಳಿಂದ ತಿಳಿದು ಬಂತು. ಘಟನೆಗೆ ಸಂಬಂಧಿಸಿದಂತೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟಿ ಸವಾಲುಃ ಆರೋಪಿಯ ಪರ ಶ್ರೀ ಎಸ್.ಎ. ವಕೀಲರಿಂದಃ**

ನಾನು ಕೃತಿಕನ ಬಳಿ ಮಾತನಾಡಿರುವುದಿಲ್ಲ. ಕೃತಿಕನ ಮನಸ್ಥಿತಿ ಸರಿ ಇರಲಿಲ್ಲ ಎಂದು ನನಗೆ ಗೊತ್ತಾಗಿತ್ತು. ಆತ ಏನೇನು ಕೆಟ್ಟ ಅಭ್ಯಾಸ ಮಾಡುತ್ತಿದ್ದ ಎಂದು ಗೊತ್ತಾಗಿತ್ತು. ಆರೋಪಿಯ ಮೊಬೈಲಿನಲ್ಲಿ ಏನೇನು ವಿಷಯ ಇತ್ತು ನನಗೆ ಗೊತ್ತಿಲ್ಲ. ಎಲ್ಲಾ ವಿಷಯವನ್ನು ನಾನು ಪೋಲಿಸರಿಗೆ ಹೇಳಿಲ್ಲ, ಪೋಲಿಸರೇ ನನಗೆ ಎಲ್ಲಾ ವಿಷಯಗಳನ್ನು ತಿಳಿಸಿರುತ್ತಾರೆ. ಕೃತಿಕ ಬಳಿ ಸಿಕ್ಕಿದ ಕಾಗದದಲ್ಲಿ ಏನು ಬರೆದಿತ್ತು ಎಂದು ಪೋಲಿಸರು ನನಗೆ ಹೇಳಿಲ್ಲ. ಸದ್ರಿ ಕಾಗದವನ್ನು ಕೃತಿಕನೇ ಬರೆದಿರುವುದು ಮತ್ತು ಅದರಲ್ಲಿ ಬೇರೆ ಯಾರ ಕೈವಾಡ ಇಲ್ಲ ಎಂದು ನಮಗೆ ತಿಳಿದು ಬಂದಿರುತ್ತದೆ. ಕೃತಿಕ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಕಾರಣ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಕೃತಿಕ ತನ್ನ ಹಣವನ್ನು ಹುಡುಗಿಯರ ಸಹವಾಸಕ್ಕೆ ಮತ್ತು ಕುಡಿತದಿಂದ ಖರ್ಚು ಮಾಡಿದ್ದಾನೆ ಎಂದು ತಿಳಿದು ಬಂದಿರುತ್ತದೆ. ಆರೋಪಿ ದಿನೇಶ ಮದುವೆಯಾಗಿ ಹೋದ ನಂತರದಲ್ಲಿ ನನ್ನ ಸಂಪರ್ಕಕ್ಕೆ

ಯಾವತ್ತೂ ಬಂದಿಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳನ್ನು ಪೋಲಿಸರು ಹೇಳಿದ ಪ್ರಕಾರ ಹೇಳಿದ್ದೇನೆ ಎಂದರೆ ಸರಿ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ